**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 09-01-2024.**

**ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದ :**

**1)** ನಾನು ಎಸ್.ಎಸ್.ಎಲ್.ಸಿ. ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ್ ಸ್ವಲ್ಪ ಮಟ್ಟಿಗೆ ಓದಲು ಬರೆಯಲು ಬರುತ್ತದೆ. ನಮ್ಮ ತಂದೆಗೆ ಒಟ್ಟು ಆರು ಜನ ಮಕ್ಕಳು. ಇಬ್ಬರು ಗಂಡು ಮಕ್ಕಳು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು. ನಮ್ಮ ತಂದೆ 1986 ರಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಂದೆ ಏನೆಲ್ಲಾ ವ್ಯವಹಾರ ಮಾಡುತ್ತಿದ್ದರು ಎಂದು ನನಗೆ ಮಾಹಿತಿ ಇದೆ. ನಮ್ಮ ತಂದೆಗೆ ಮತ್ತು 1 ನೇ ಪ್ರತಿವಾದಿಗೆ ತುಂಬಾ ವ್ಯವಹಾರಗಳು ಇದ್ದವು ಎಂದರೆ ಸರಿಯಲ್ಲ. ದಾವಾ ಸರ್ವೆ ಸಂಖ್ಯೆಯಲ್ಲಿ ಒಟ್ಟು 4 ಎಕರೆ ಜಮೀನು 1 ನೇ ಪ್ರತಿವಾದಿ ಹೆಸರಿಗೆ 1961-62 ರಲ್ಲಿ ಮಂಜೂರು ಆಗಿತ್ತು ಎಂದರೆ ಸರಿ. ಸರ್ವೆ ಸಂಖ್ಯೆ 198 ಗೋಮಾಳ ಸ್ವತ್ತು ಎಂದರೆ ಸರಿ. ಸದರಿ ಸರ್ವೆ ಸಂಖ್ಯೆ ಸುಮಾರು 350 ಎಕರೆ ಇದೆ ಎಂದರೆ 400 ಎಕರೆ ಇದೆ ಎಂದು ನುಡಿಯುತ್ತೇನೆ. ಮಂಜೂರಾತಿ ಆದಾಗಿನಿಂದ 1 ನೇ ಪ್ರತಿವಾದಿ ಸದರಿ 4 ಎಕರೆ ಜಮೀನಿನ ಸ್ವಾಧೀನವನ್ನು ಹೊಂದಿದ್ದರು ಎಂದರೆ ಸರಿ. ಮ್ಯುಟೇಶನ್ ಸಂಖ್ಯೆ 5-1972-73 ರ ಪ್ರಕಾರ 1 ನೇ ಪ್ರತಿವಾದಿ ಹೆಸರಿಗೆ ಮ್ಯುಟೇಶನ್ ಆದೇಶ ಆಗಿರುತ್ತದೆ ಎಂದರೆ ಸರಿ. ಅಂದಿನಿಂದ 1987-88 ರ ವರೆಗೆ ಪಹಣಿ ಪತ್ರಿಕೆಗಳಲ್ಲಿ 1 ನೇ ಪ್ರತಿವಾದಿಯ ಹೆಸರು ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಹೆಸರು 1975-1987 ರ ವರೆಗೆ ಇದೆ ಎಂದು ಸಾಕ್ಷಿಯು ಸ್ವತಃ ನುಡಿಯುತ್ತಾರೆ. ಆ ಅವಧಿಯಲ್ಲಿ 1 ನೇ ಪ್ರತಿವಾದಿಯ ಹೆಸರು ಮಾತ್ರ ನಮೂದು ಇರುತ್ತದೆ, ನಮ್ಮ ತಂದೆಯ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. 2006 ರಲ್ಲಿ 2 ನೇ ಪ್ರತಿವಾದಿ 4 ಎಕರೆ ಜಮೀನನ್ನು ಭೂ ಸ್ವಾಧೀನ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸುತ್ತದೆ ಎಂದರೆ ಸರಿ. ಸುತ್ತಮುತ್ತಲ ಹಳ್ಳಿಗಳಲ್ಲಿ ಒಟ್ಟು 3000 ಎಕರೆ ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿದೆ ಎಂದರೆ ಸರಿ.

ಸರ್ವೆ ಸಂಖ್ಯೆ 198 ರಲ್ಲಿ 400 ಎಕರೆಯನ್ನೂ ಸೇರಿ ಅಧಿಸೂಚನೆ ಹೊರಡಿಸಲಾಗಿದೆ. 2007 ರಲ್ಲಿ ಅದರ ಪರಿಹಾರದ ಹಣವನ್ನು ಪಾವತಿಸಲಾಗಿದೆ ಎಂದರೆ ಸರಿ. ಸರ್ವೆ ಸಂಖ್ಯೆ 198 ರಲ್ಲಿ ನಮಗೆ ಸೇರಿದ ದಾವಾ ಸ್ವತ್ತಿನ ಹೊರತಾದ ಪ್ರತ್ಯೇಕ 2 ಎಕರೆ ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನಿನ ಬಗ್ಗೆ ಪ್ರತೀ ಎಕರೆಗೆ 60 ಲಕ್ಷ ರೂಪಾಯಿಗಳಂತೆ ನಾವು ಪರಿಹಾರ ಪಡೆದುಕೊಂಡಿರುತ್ತೇವೆ. ಸದರಿ ಪರಿಹಾರವನ್ನು 2007 ರಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸುಮಾರು 2012 ರಲ್ಲಿ ಪಡೆದುಕೊಂಡಿರುತ್ತೇವೆ. ಸದರಿ ಪರಿಹಾರವನ್ನು ಕಂದಾಯ ಇಲಾಖೆ ಮತ್ತು ಕೆಐಎಡಿಬಿ ಯವರು ಜಂಟಿ ಸರ್ವೆ ಮಾಡಿದ ನಂತರ ಪಾವತಿಸಲಾಯಿತು ಎಂದರೆ ಸರಿ. ನಮ್ಮ 2 ಎಕರೆ ಜಮೀನಿನ ಬಗ್ಗೆ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ಪರಿಶೀಲಿಸಿ ಪರಿಹಾರವನ್ನು ನೀಡಿರುತ್ತಾರೆ ಎಂದರೆ ಸರಿ. ಅದೇ ದಿನ ದಾವಾ ಸ್ವತ್ತಿನ ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜಂಟಿ ಸರ್ವೆ ಮಾಡುವಾಗ ನಾನು ಹಾಜರಿದ್ದು, ನಮ್ಮ ಸ್ವಾಧೀನದಲ್ಲಿದ್ದ ಜಮೀನನ್ನು ತೋರಿಸಿರುತ್ತೇನೆ ಎಂದರೆ ಸರಿ. ಯಾರು ಯಾರು ಸ್ವಾಧೀನದಲ್ಲಿ ಇದ್ದಾರೆ, ಸರ್ವೆ ಸಂಖ್ಯೆ 198 ರ ಸಂಪೂರ್ಣ ಗೋಮಾಳ ಜಮೀನಿನ ಬಗ್ಗೆ ಬರೆದಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿ ಸದರಿ ವರದಿಯಲ್ಲಿ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನ ಹೊಂದಿದ್ದಾರೆ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ಆ ಬಗ್ಗೆ ನನಗೆ ಗೊತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಂಟಿ ಸರ್ವೆ ಮಾಡಿದಾಗ ದಾವಾ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಬೇರೆ ಸ್ವತ್ತುಗಳ ಪರಿಹಾರವನ್ನು ಪಡೆದುಕೊಳ್ಳುವಾಗ ದಾವಾ ಸ್ವತ್ತಿನ ಪರಿಹಾರವನ್ನು ಸಹ ಪಡೆದುಕೊಳ್ಳಲು ಏನು ತೊಂದರೆ ಇತ್ತು ಎಂದು ಕೇಳಲು ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತೇನೆ. ಜಂಟಿ ಸರ್ವೆ ಮಾಡುವಾಗ ಖಾತೆ 1 ನೇ ಪ್ರತಿವಾದಿಯ ಹೆಸರಿನಲ್ಲಿರಲಿಲ್ಲ ಹಾಗೂ ಆ ಬಗ್ಗೆ ಅವರು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. 2011 ರಲ್ಲಿ ಅವರು ಅರ್ಜಿ ಸಲ್ಲಿಸಿದ್ದು, ಆಗಲೇ ನನಗೆ ಸದರಿ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ.

ಉಪವಿಭಾಗಾಧಿಕಾರಿಗಳ ಎದುರು ಸಲ್ಲಿಸಿದ ಅರ್ಜಿ ವಜಾ ಆಗಿದ್ದು, 1 ನೇ ಪ್ರತಿವಾದಿ ಜಿಲ್ಲಾಧಿಕಾರಿಗಳ ಎದುರು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ಪುರಸ್ಕರಿಸಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಮಾಡಬೇಕು ಎಂದು ಅದೇಶ ಆಯಿತು ಎಂದರೆ ನನಗೆ ಗೊತ್ತಿಲ್ಲ. ನನಗೆ ಆ ಬಗ್ಗೆ 2021 ರಲ್ಲಿ ತಿಳಿಯಿತು. 2011 ರಲ್ಲಿ ಸದರಿ ವಿಚಾರ ಗೊತ್ತಿದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎದರೆ ಸರಿಯಲ್ಲ.

**(ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**